Reg. No. | | | | | | | | | | | |

**BCAKALN 202**

## II Semester B.C.A. Degree Examination, June/July 2024
## (NEP-2020) (2022-2023 Batch Onwards)
## KANNADA
## Kannada Language (AECC)

Time : 2 Hours Max. Marks : 60

(2×8=16)

I. **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ :

1) ಹಣದಿಂದ ಉಂಟಾಗುವ ಲಾಭ-ನಷ್ಟಗಳನ್ನು ಪುರಂದರದಾಸರು ಹೇಗೆ ಚಿತ್ರಿಸಿದ್ದಾರೆ ?

2) ಕನ್ನಡ ಭಾಷೆಯ ಬೆಳವಣಿಗೆಗೆ ಆಧುನಿಕ ತಂತ್ರಜ್ಞಾನ ಹೇಗೆ ಸಹಕಾರಿಯಾಗಿದೆ ? ವಿವರಿಸಿರಿ.

3) ''ಬದುಕು ಯಾರಿಗೂ ಕಾಯುವುದಿಲ್ಲ'' ಎಂಬ ಮಾತನ್ನು ನೇಮಿಚಂದ್ರರು ಹೇಗೆ ಅಭಿವ್ಯಕ್ತಗೊಳಿಸಿದ್ದಾರೆ ? ತಿಳಿಸಿರಿ.

4) ''ಸಂಗ್ರಹಣೆ, ಶೇಖರಣೆಗಿಂತ ಹಂಚಿಕೊಳ್ಳುವುದರಲ್ಲಿ ನಿಜವಾದ ಸಂತೃಪ್ತಿ ಇದೆ'' – ಈ ಮಾತನ್ನು ಸ್ಪಷ್ಟೀಕರಿಸಿರಿ.

(2×6=12)

II. **ಎರಡು** ಪ್ರಶ್ನೆಗಳಿಗೆ ಉತ್ತರಿಸಿರಿ :

1) ಕರ್ಣನ ಕಳೇಬರವನ್ನು ಕಂಡ ದುರ್ಯೋಧನನ ಮನಸ್ಥಿತಿಯನ್ನು ರನ್ನ ಕವಿ ಹೇಗೆ ಚಿತ್ರಿಸಿದ್ದಾನೆ ?

2) ಕ್ಯಾಮರಾ ಕೈಗಾರಿಕೆಯಲ್ಲಿ ಜಪಾನ್‌ನ ಸಾಧನೆಯೇನು ? ವಿಶದೀಕರಿಸಿರಿ.

3) ದಾಂಪತ್ಯವನ್ನು ಮಧುರಗೊಳಿಸಿಕೊಳ್ಳುವ ಬಗೆ 'ಮನದನ್ನೆ' ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ ?

4) ಹರೇಕಳ ಮೊಯ್ದಿನ್‌ನವರು ನಾಡಿಗೆ ನೀಡಿದ ಕೊಡುಗೆಗಳೇನು ?

(1×4=4)

III. **ಒಂದು** ಪದ್ಯದ ಸಂದರ್ಭದೊಂದಿಗೆ ಭಾವವನ್ನು ಬರೆಯಿರಿ :

1) ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮೆಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್

**ಅಥವಾ**

2) ಬೇಕಾದ ಹಣ್ಣಿಹುದು, ಹೂವಿಹುದು ತೌರಿನಲಿ
ಹೊಸಸೀರೆ, ರತ್ನದಾಭರಣ;
ತಾಯಿ ಕೊರಗುವರಲ್ಲಿ ನೀವಿಲ್ಲದೂರಿನಲಿ
ನಿಮಗಿಲ್ಲ ಒಂದು ಹನಿ ಕರುಣ.

S.D.M.C. OF BUSINESS MANAGEMENT
LIBRARY

ಪು.ತಿ.ನೋ.

IV. ಮೂರರ ಸಂದರ್ಭವನ್ನು ಸೂಚಿಸಿ, ಸ್ವಾರಸ್ಯವನ್ನು ಬರೆಯಿರಿ : (3×4=12)

1) ನಿನ್ನ ಸಂತೈಸೆ ಬಂದೆನಂಗಾಧಿಪತೀ
2) ನೆಂಟರ ಇಷ್ಟರ ಮರೆಸೋದು ರೊಕ್ಕ
3) ಕೂಡಿರಲಿ ಬಾಳು ಇಡಿಗಾಳಿನಂತೆ
4) ಅಮ್ಮನಿಗೆ ನಿಮ್ಮದೇ ಕನಸು.

V. ಎರಡಕ್ಕೆ ಟಿಪ್ಪಣಿ ಬರೆಯಿರಿ : (2×4=8)

1) ಪುರಂದರದಾಸ.
2) ಕೆ. ಎ. ದಯಾನಂದ.
3) ದ. ರಾ. ಬೇಂದ್ರೆ.
4) ಇಸ್ಮತ್ ಪಜೀರ್.

VI. ಒಂದು ವಾಕ್ಯದಲ್ಲಿ ಉತ್ತರಿಸಿರಿ : (8×1=8)

1) 'ಶಕ್ತಿಕವಿ' ಎಂದು ಪ್ರಸಿದ್ಧನಾದವನು ಯಾರು ?
2) 'ನಿರಂಜನ' ಯಾರ ಕಾವ್ಯನಾಮ ?
3) 'ಚಿದಂಬರ ರಹಸ್ಯ' – ಇದು ಯಾರು ರಚಿಸಿದ ಕಾದಂಬರಿ ?
4) ಬರಹ ತಂತ್ರಾಂಶವನ್ನು ನಿರ್ಮಿಸಿದವರು ಯಾರು ?
5) ಕನ್ನಡದ ಪ್ರೇಮಕವಿ ಎಂಬ ಹೆಗ್ಗಳಿಕೆಗೆ ಪಾತ್ರರಾದವರು ಯಾರು ?
6) 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' – ಇದು ಯಾರ ಕೃತಿ ?
7) 'ವ್ಯಾಕ್ಸಿನ್ ಪೈಲ್ವಾನ್' ಯಾವ ರೀತಿಯ ನಾಟಕ ?
8) ವೃಕ್ಷಕ್ರಾಂತಿಯ ಹರಿಕಾರ ಯಾರು ?

S.D.M.C. OF BUSINESS MANAGEMENT LIBRARY